ಸಾಕ್ಷಿಯನ್ನು ದಿಃ 02-01-2024 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಶ್ರೀ ವಿ ಸಿ ಎಸ್ ವಕೀಲರಿಂದಃ**

ಯಲ್ಲಪ್ಪ ನನ್ನ ತಂದೆ. ನಮ್ಮ ಮನೆತನದ ವ್ಯವಹಾರವನ್ನು ನನ್ನ ತಂದೆ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಾಯಿಯ ತವರು ಮನೆಯ ಮನೆತನದ ಹೆಸರು ಮಣ್ಣೂರು. ನನ್ನ ತಾಯಿಯು ಕುರ್ತಕೋಟಿ ಗ್ರಾಮದವರು. ನನ್ನ ತಂದೆ ಯಲ್ಲಪ್ಪನಿಗೆ ಇಬ್ಬರು ಹೆಂಡಂದಿರು. ನನ್ನ ತಂದೆಯ ಮೊದಲನೇಯ ಹೆಂಡತಿಯ ಹೆಸರು ನನಗೆ ಗೊತ್ತಿಲ್ಲ. ನನ್ನ ತಂದೆಗೆ ತನ್ನ ತಂದೆಯಿಂದ ಪಿತ್ರಾರ್ಜಿತವಾಗಿ ಆಸ್ತಿಗಳು ಬಂದಿವೆಯೇ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಸರ್ವೇ ನಂ. 719/1 ಮೂಲತಃ ಒಂದೇ ಆಸ್ತಿ ಎಂದರೆ 11 ಎಕರೆ 10 ಗುಂಟೆ ಎಂದರೆ ಸರಿ. ಸದರಿ ಸರ್ವೇ ನಂ. ನಲ್ಲಿ ಈಗ ವಿಭಾಗಗಳಾಗಿದ್ದು, ಸರ್ವೇ ನಂ. 719/1 ರಿಂದ 719/3 ಆಗಿದೆ ಎಂದರೆ ಸರಿ. ಸರ್ವೇ ನಂ. 719/1 ನ್ನು ನನ್ನ ತಂದೆಯು ಸ್ವಂತವಾಗಿ ಖರೀದಿ ಹಿಡಿದಿದ್ದರು ಎಂದರೆ ಸರಿ. ನನ್ನ ತಂದೆ ಮೊದಲನೇಯ ಹೆಂಡತಿಗೆ ಮಕ್ಕಳಾದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಾಯಿಯ ತವರು ಮನೆಯವರು ನನ್ನ ತಾಯಿಯ ಹೆಸರಿನಲ್ಲಿ ಆಸ್ತಿ ಮಾಡಬೇಕೆಂದು ನನ್ನ ತಂದೆಗೆ ಹೇಳಿದಾಗ ನನ್ನ ತಂದೆಯು ಸರ್ವೇ ನಂ. 719/1 ನ್ನು ನನ್ನ ತಾಯಿಯ ಹೆಸರಿನಲ್ಲಿ ಬಕ್ಷಿಸ ಮಾಡಿದರು ಎಂದರೆ ಸರಿ. ಆಸ್ತಿಯನ್ನು ಬಕ್ಷಿಸ ಮಾಡಿದ ನಂತರ ನನ್ನ ತಾಯಿಯ ಮದುವೆಯು ನನ್ನ ತಂದೆಯ ಜೊತೆ ಆಯಿತು ಎಂದರೆ ಸರಿ. ಬಕ್ಷೀಸ ಆದ ಕಾರಣ ಸರ್ವೇ ನಂ. 719/1 ನನ್ನ ತಾಯಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿ.

2. ವ್ಹಿ.ಪಿ.ಸಿ ನಂ. 447/2 ನ್ನು ನನ್ನ ತಂದೆಯು ಸ್ವಂತ ಗಳಿಸಿರುತ್ತಾರೆ ಎಂದರೆ ಸರಿ. ನನ್ನ ತಂದೆ ತಾಯಿಗೆ 1 ರಿಂದ 4 ವಾದಿಯರು ಹೆಣ್ಣು ಮಕ್ಕಳು ಹಾಗೂ ಬಸವಣ್ಣೆಪ್ಪ(ಗಂಡು ಮಗ) ಜನಿಸಿದೆವು ಎಂದರೆ ಸರಿ. 1978 ರಲ್ಲಿ ನನ್ನ ತಾಯಿಯು ತನ್ನ ಹೆಸರಿನಲ್ಲಿ ಆದ ಬಕ್ಷಿಸ ಆಸ್ತಿಯಾದ ಸರ್ವೇ ನಂ. 719/1 ನ್ನು ನನ್ನ ಸಹೋದರನಾದ ಬಸವಣ್ಣೆಪ್ಪನ ಹೆಸರಿನಲ್ಲಿ ವರದಿ ಮುಖಾಂತರ ಮಾಲ್ಕೀ ಹಕ್ಕು ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿ. ಆದ ಕಾರಣದಿಂದಾಗಿ ಸರ್ವೇ ನಂ. 719/1 ಬಸವಣ್ಣೆಪ್ಪನ ಸ್ವಯಾರ್ಜಿತ ಆಸ್ತಿ ಆಯಿತು ಎಂದರೆ ಸರಿ. ನನ್ನ ತಾಯಿಯು ನನ್ನ ಸಹೋದರನ ಹೆಸರಿನಲ್ಲಿ ಸರ್ವೇ ನಂ. 719/1 ರ ಸಂಪೂರ್ಣ ಮಾಲ್ಕೀ ಹಕ್ಕನ್ನು ಮಾಡಿಕೊಟ್ಟ ಬಗ್ಗೆ ನಮ್ಮ ನಾಲ್ಕು ಜನ ಸಹೋದರಿಯಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನನ್ನ ಗಂಡನ ಮನೆಯ ಊರು ಯಾವುದು ಎಂದು ನನಗೆ ಗೊತ್ತಿಲ್ಲ. 1 ನೇ ವಾದಿಯನ್ನು ಲಕ್ಷ್ಮೇಶ್ವರ ಊರಿಗೆ, 2 ಹಾಗೂ 3 ನೇ ವಾದಿಯರಿಗೆ ಸಂಗನಾಳ ಊರಿಗೆ ಮದುವೆ ಮಾಡಿಕೊಟ್ಟಿರುತ್ತಾರೆ. 1 ರಿಂದ 3 ನೇ

ವಾದಿಯರು ತಮ್ಮ ಪತಿಯ ಊರಿನಲ್ಲಿ ವಾಸಿಸುತ್ತಾರೆ. ನಾನು ಕುರ್ತಕೋಟಿಯಲ್ಲಿ ವಾಸಿಸುತ್ತೇನೆ. ನಾನು ಕುರ್ತಕೋಟಿಯಲ್ಲಿ ವಾಸಿಸುತ್ತೇನೆ ಎಂದು ನನ್ನ ಬಳಿ ದಾಖಲೆಗಳಿಗೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರಪಡಿಸಿದ್ದೇನೆ. ನಾನು ಕುರ್ತಕೋಟಿಯಲ್ಲಿ ವಾಸಿಸುವುದರಿಂದ ನನ್ನ ತವರು ಮನೆಯಲ್ಲಿ ಆಗುವ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ.

3. ಬಸವಣ್ಣೆಪ್ಪನಿಗೆ ಆಸ್ತಿಯನ್ನು ಬಿಟ್ಟು ಕೊಟ್ಟ ನಂತರ ಆತನ ಮದುವೆಯಾಗಿದ್ದು ಅವನು ಸಹ ಎರಡು ಮದುವೆಯನ್ನು ಮಾಡಿಕೊಂಡಿರುತ್ತಾನೆ ಎಂದರೆ ಸರಿ. ಬಸವಣ್ಣೇಪ್ಪನ ಮೊದಲನೇಯ ಹೆಂಡತಿಯ ಹೆಸರು ಗಂಗವ್ವ. ಬಸವಣ್ಣೇಪ್ಪ ಹಾಗೂ ಗಂಗವ್ವಳಿಗೆ ಯಲ್ಲಪ್ಪ ಎಂದು ಒಬ್ಬನೇ ಗಂಡು ಸಂತಾನ ಇರುತ್ತಾನೆ. ಯಲ್ಲಪ್ಪನಿಗೆ ರಾಜು ಎಂತಲೂ ಕರೆಯುತ್ತಾರೆ ಎಂದರೆ ಸರಿ. ಯಲ್ಲಪ್ಪನು ಚಿಕ್ಕನಿರುವಾಗ ಗಂಗವ್ವಳು ಮೃತ ಪಟ್ಟಿರುತ್ತಾಳೆ ಎಂದರೆ ಸರಿ. ಆದ ಕಾರಣದಿಂದಾಗಿ ಬಸವಣ್ಣೆಪ್ಪನು ಎರಡನೆಯ ಮದುವೆಯನ್ನು ಮಾಡಿಕೊಳ್ಳುವ ಅನಿವಾರ್ಯತೆ ಬಂದಿರುತ್ತದೆ ಎಂದರೆ ಸರಿ. ಎರಡನೆಯ ಮದುವೆ ಆಗುವ ಮೊದಲು ಬಸವಣ್ಣೆಪ್ಪನು ಭವಿಷ್ಯತ್ತಿನಲ್ಲಿ ಯಾವುದೇ ತೊಂದರೆ ಆಗಬಾರದೆಂದು ತನ್ನ ಸ್ವಯಾರ್ಜಿತ ಆಸ್ತಿಯಾದ ಸರ್ವೇ ನಂ. 719/1 ರಲ್ಲಿ ಅರ್ಧ ಭಾಗ ತನಗೆ ಹಾಗೂ ಅರ್ಧ ಭಾಗ ಯಲ್ಲಪ್ಪನಿಗೆ ಭಾಗ ಮಾಡಿಕೊಟ್ಟನು ಎಂದರೆ ಸರಿ. 6 ಎಕರೆ ಯಲ್ಲಪ್ಪನಿಗೆ, 5 ಎಕರೆ 10 ಗುಂಟೆಯನ್ನು ಬಸವಣ್ಣೆಪ್ಪನು ತನೆಗೆ ಇಟ್ಟುಕೊಂಡನು ಎಂದರೆ ಸರಿ. ಯಲ್ಲಪ್ಪನ ಆರೋಗ್ಯ ಸ್ಥಿತಿ ಮೊದಲಿನಿಂದಲೂ ಚೆನ್ನಾಗಿದ್ದು, ನನ್ನ ಜೊತೆಗೆ ಹಳಿಯಾದ ಹಾವಿಯಲ್ಲಿ ವಾಸಿಸುತ್ತಿದ್ದನು. ಯಲ್ಲಪ್ಪನು ನನ್ನ ಜೊತೆಗೆ ವಾಸಿಸುತ್ತಿದ್ದನು ಎಂದು ತೋರಿಸಲು ನನ್ನ ಬಳಿ ದಾಖಲೆಗಳಿವೆ. ಯಲ್ಲಪ್ಪನು ಮೃತಪಟ್ಟಾಗ ಆತನಿಗೆ 32 ವರ್ಷ ವಯಸ್ಸಾಗಿತ್ತು. ಯಲ್ಲಪ್ಪನ ಹೆಸರಿಗೆ ಬಂದ ಜಮೀನನ್ನು ಯಲ್ಲಪ್ಪನೇ ಸಾಗುವಳಿ ಮಾಡುತ್ತಿದ್ದನು ಎಂದರೆ ಸರಿ. ಯಲ್ಲಪ್ಪನ ಆರೋಗ್ಯ ಸ್ಥಿತಿ ಸರಿಯಾಗಿ ಇರದೇ ಇರುವುದರಿಂದ ಯಲ್ಲಪ್ಪನು 1 ರಿಂದ 4 ನೇ ಪ್ರತಿವಾದಿಯರ ಜೊತೆಗೆ ವಾಸಿಸುತ್ತಿದ್ದನು ಎಂದರೆ ಸರಿಯಲ್ಲ. ಯಲ್ಲಪ್ಪನ ದವಾಖಾನೆಯ ಖರ್ಚನ್ನು 1 ರಿಂದ 4 ನೇ ಪ್ರತಿವಾದಿಯರು ನೋಡಿಕೊಳ್ಳುತ್ತಿದ್ದರು ಎಂದರೆ ನಾನು ನೋಡಿಕೊಳ್ಳುತ್ತಿದ್ದೆನು. ಯಲ್ಲಪ್ಪನ ಆರೋಗ್ಯ ಸ್ಥಿತಿ ಸರಿ ಇರದೇ ಇರುವುದರಿಂದ ಸರ್ವೆ ನಂ. 719/1 ರಲ್ಲಿಯ 2 ಎಕರೆ ಜಮೀನನ್ನು ಮಾರಾಟ ಮಾಡಬೇಕಾಯಿತು ಎಂದರೆ ಸರಿಯಲ್ಲ. ಯಲ್ಲಪ್ಪ ನ ಮರಣಾ ನಂತರ ಆತನಿಗೆ ಬಂದ 6 ಎಕರೆ ಆಸ್ತಿಗೆ 1 ರಿಂದ 4 ನೇ ಪ್ರತಿವಾದಿಯರ ಹೆಸರು ವಾರಸುದಾರರು ಎಂದು ದಾಖಲಾಯಿತು ಎಂದರೆ ನಮಗೆ ಗೊತ್ತಿರದೇ ಪ್ರತಿವಾದಿಯರು ತಮ್ಮ ಹೆಸರನ್ನು

ದಾಖಲಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ತಂದೆ ತಾಯಿಯ ಜೀವಿತಕಾಲದಲ್ಲಿ ಸರ್ವೇ ನಂ. 719/1 ರಲ್ಲಿ ನಾವು ಪಾಲು ವಿಭಾಗವನ್ನು ಕೇಳಿಲ್ಲ. ಯಲ್ಲಪ್ಪನ ಮರಣಾನಂತರ ಪೂರ್ತಿ ಆಸ್ತಿಯು 1 ರಿಂದ 4 ನೇ ಪ್ರತಿವಾದಿಯರಿಗೆ ಬಂದಿದೆ ಎಂದು ನಾವು ಹೊಟ್ಟೆ ಕಿಚ್ಚು ಪಟ್ಟುಕೊಂಡು ನಮಗೂ ಸಹ ಪಾಲು ಬೇಕೆಂದು ಕೇಳುತ್ತಿದ್ದೇವೆ ಎಂದರೆ ನಮ್ಮ ತಾಯಿಯ ಆಸ್ತಿಯು ನಮಗೆ ಬೇಕು ಎಂದು ಹೇಳುತ್ತಾರೆ. ನಮ್ಮ ತಾಯಿಯ ಜೀವಿತಾವಧಿಯಲ್ಲಿ ನಮ್ಮ ತಾಯಿಯು ಬಸವಣ್ಣೆಪ್ಪನಿಗೆ ಸರ್ವೇ ನಂ. 719/1 ರ ಮಾಲ್ಕೀ ಹಕ್ಕನ್ನು ಬಿಟ್ಟು ಕೊಟ್ಟಿದ್ದರಿಂದ ಬಸವಣ್ಣೆಪ್ಪನು ಸಂಪೂರ್ಣ ಮಾಲೀಕನಿದ್ದು ನಮಗೆ ಯಾರಿಗೂ ಹಕ್ಕು, ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಮಗೆ ಎಲ್ಲ ವಿಷಯ ಗೊತ್ತಿದ್ದರೂ ಸಹ ಪ್ರತಿವಾದಿಯರಿಗೆ ತೊಂದರೆ ಕೊಡಬೇಕೆನ್ನುವ ದುರುದ್ದೇಶದಿಂದ ಸುಳ್ಳು ವ್ಯಾಜ್ಯ ಸಲ್ಲಿಸಿ, ಸುಳ್ಳು ಪ್ರಮಾಣ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ವಿ ಎಮ್ ಹೆಚ್, ಡಿಎಮ್ಎನ್ ಪರ ನ್ಯಾಯವಾದಿಗಳಿಂದ**

ವಿ ಎಮ್ ಹೆಚ್, ಡಿಎಮ್ಎನ್ ಪರ ನ್ಯಾಯವಾದಿಗಳಿಂದ ಕಾಲವಕಾಶ ಕೋರಿದ್ದು ಅನುಮತಿ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.

OS: 317/22
PW- 1